

# ಪ್ರಬುದ್ಧ ನಾಗರಿಕತೆ

ಪೋಷಕರೇ, ಶಿಕ್ಷಕರೇ ಗಮನಿಸಿ

(ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಒಂದು ಭಾಷಣದಿಂದ)

ಒಳ್ಳೆಯತನವೇ ಮಾನವನ ಚಾರಿತ್ರ್ಯವನ್ನು ರೂಪಿಸುವ ಆಧಾರಸ್ತಂಭವಾಗಿದೆ. ಒಂದು ದೇಶದ ಚಾರಿತ್ರ್ಯವು ಆ ದೇಶದ ಜನರ ಚಾರಿತ್ರ್ಯದ ಮೇಲೆ ಅವಲಂಬಿತವಾಗಿದೆ ಎನ್ನಬಹುದು. ಪ್ರಪಂಚದಾದ್ಯಂತ **ಸಂತೋಷಕರವಾದ**, ಸಮೃದ್ಧವಾದ ಮತ್ತು ಶಾಂತಿಯುತವಾದ ಸಮಾಜವನ್ನು ನಾವು ವಿಕಸನಗೊಳಿಸುವುದು ಹೇಗೆ ತಾನೇ ಸಾಧ್ಯ? ಆಮೂಲಕ ಎಲ್ಲ ಜನರಿಗೂ ಸ್ಥಿರವಾದ ಭವಿಷ್ಯವನ್ನು ಒದಗಿಸಲು ಹೇಗೆ ಸಾಧ್ಯ? ಇದಕ್ಕಾಗಿ ನಾವು ಜ್ಞಾನವನ್ನು ಮತ್ತು ಸಂಪನ್ಮೂಲಗಳನ್ನು ಹಂಚಿಕೊಳ್ಳಬೇಕು.

*ಹೃದಯದಲ್ಲಿ ಒಳ್ಳೆಯತನವಿದ್ದರೆ, ಆಗ ಮನೆಗಳಲ್ಲಿ ಸೌಹಾರ್ದವಿರುತ್ತದೆ. ಮನೆಗಳಲ್ಲಿ ಸೌಹಾರ್ದವಿದ್ದಾಗ, ದೇಶದಲ್ಲಿ ಸುವ್ಯವಸ್ಥೆ ಇರುತ್ತದೆ. ದೇಶಗಳಲ್ಲಿ ಸುವ್ಯವಸ್ಥೆ ಇದ್ದಾಗ, ಪ್ರಪಂಚದಲ್ಲಿ ಶಾಂತಿ ನೆಲೆಗೊಳ್ಳುತ್ತದೆ.*

ಮಕ್ಕಳಲ್ಲಿ ಒಳ್ಳೆಯತನವನ್ನು ಶಿಕ್ಷಣದ ಮೂಲಕ ಮೂಡಿಸಬಹುದು. ಇದರಲ್ಲಿ ಮೂವರು ವ್ಯಕ್ತಿಗಳು ಮಹತ್ವದ ಪಾತ್ರವನ್ನು ವಹಿಸುತ್ತಾರೆ: **ತಂದೆ, ತಾಯಿ ಮತ್ತು ಪ್ರಾಥಮಿಕ ಶಾಲೆಯ ಶಿಕ್ಷಕರು.**

ಯಾವುದೇ ಕಾಲವನ್ನು ತೆಗೆದುಕೊಂಡರೂ, ನಮ್ಮ ಜನಸಂಖ್ಯೆಯಲ್ಲಿ ೩೦೦ ದಶಲಕ್ಷದಷ್ಟು ಮಕ್ಕಳೇ ಇರುತ್ತಾರೆ. ಮಕ್ಕಳು ತಮ್ಮ ೧೨ನೆಯ ತರಗತಿಯನ್ನು ಮುಗಿಸುವ ವೇಳೆಗೆ ೨೫,೦೦೦ ಗಂಟೆಗಳಷ್ಟು ಕಾಲ ಶಾಲೆಗಳಲ್ಲಿ ಇದ್ದುಕೊಂಡು ಅಧ್ಯಯನ ಮಾಡಿರುತ್ತಾರೆ.

ನಮ್ಮಲ್ಲಿ ಪ್ರತಿಯೊಬ್ಬರೂ ಬಾಲ್ಯದಿಂದ ಹಿಡಿದು, ವೃತ್ತಿಯನ್ನು ಹಿಡಿಯುವ ತನಕ ಶಿಕ್ಷಣದ ಹಲವಾರು ಹಂತಗಳನ್ನು ಹಾದು ಹೋಗಿರುತ್ತೇವೆ. ಒಂದು ವ್ಯಕ್ತಿಯು ಒಂದು ನಿರ್ದಿಷ್ಟ ಪರಿಸ್ಥಿತಿಗೆ ಹೇಗೆ ಪ್ರತಿಕ್ರಿಯಿಸುತ್ತಾನೆ – ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ – 'ಮಾನವ ಆವಶ್ಯಕತೆ'ಗೆ ಹೇಗೆ ಸ್ಪಂದಿಸುತ್ತಾನೆ?

***ಒಂದು ಮಗು ಕೇಳುತ್ತದೆ, "ನನಗೆ ನೀವು ಏನು ತಾನೇ ಮಾಡುತ್ತೀರಿ?" ಎಂದು. ಒಬ್ಬ ಹದಿಹರೆಯದ ಹುಡುಗ ಹೇಳುತ್ತಾನೆ, "ನಾನೊಬ್ಬನೇ ಮಾಡಲು ಬಯಸುತ್ತೇನೆ" ಎಂದು. ಒಂದು ಯುವಕ ಹೇಳುತ್ತಾನೆ, "ನಾವೆಲ್ಲರೂ ಒಟ್ಟಾಗಿ ಮಾಡೋಣ" ಎಂದು. ಒಬ್ಬ ನಾಯಕ ಕೇಳುತ್ತಾನೆ, "ನಾನು ನಿಮಗೆ ಏನುತಾನೇ ಮಾಡಲಿ?" ಎಂದು.***

ಆದ್ದರಿಂದ, ಪ್ರಬುದ್ಧ ನಾಗರಿಕತೆಗಾಗಿ ಶಿಕ್ಷಣ ಎಂದರೆ, 'ನನಗೆ ನೀವು ಏನು ತಾನೇ ಮಾಡುತ್ತೀರಿ?' ಎಂಬ ಭಾವನೆಯನ್ನು 'ನಾನು ನಿಮಗೆ ಏನುತಾನೇ ಮಾಡಲಿ?' ಎಂಬ ಭಾವನೆಗೆ ಪರಿವರ್ತಿಸುವುದು.

ನಾವು ಇಂದು ಒಂದು ಸಂಕೀರ್ಣ ಪರಿಸ್ಥಿತಿಯ ನಡುವೆ ಹಾದುಹೋಗುತ್ತಿದ್ದೇವೆ. ಏಕೆಂದರೆ, ನಮ್ಮಲ್ಲಿ ಬಹಳಷ್ಟು ಜನ, ನಮ್ಮೊಡನೆಯೇ ಸಂಪೂರ್ಣವಾಗಿ ಯುದ್ಧದಲ್ಲಿ ತೊಡಗಿದ್ದೇವೆ. ಪ್ರತಿಯೊಂದು ನಿಮಿಷವೂ ನಮ್ಮ ಮನಸ್ಸಿನಲ್ಲಿ, ನಾವು ಈ ಮಾರ್ಗವನ್ನು ಹಿಡಿಯಬೇಕೋ ಅಥವಾ ಇನ್ನೊಂದು ಮಾರ್ಗವನ್ನೋ ಎನ್ನುವ ತಾಕಲಾಟ ನಡೆಯುತ್ತಲೇ ಇರುತ್ತದೆ. ನಮ್ಮಲ್ಲಿ ಯಾವಾಗ ಗೊಂದಲ ಉಂಟಾಗುವುದೋ, ಆಗ ನಾವು ಭಗವಂತನ ಸುಜ್ಞಾನವನ್ನು ಅರಸಬೇಕು. ಅಂಥ ಜ್ಞಾನವು ನಮ್ಮನ್ನು ಒಳ್ಳೆಯತನದ ಮಾರ್ಗದಲ್ಲಿ ಮುನ್ನಡೆಸುತ್ತದೆ.

ಈ ವಿಧಾನದಿಂದ ಪೋಷಕರು, ಮಕ್ಕಳನ್ನು ಅವರ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಜ್ಞಾನ ಮತ್ತು ಅನುಭವಗಳಿಂದ ಸುಸಂಪನ್ನರನ್ನಾಗಿ ಮಾಡಬೇಕು.

ಈ ವಿಧಾನದಿಂದ ಒಬ್ಬ ಶಿಕ್ಷಕನು ಜ್ಞಾನ ಮತ್ತು ಅನುಭವಗಳಿಂದ ಸಂಪನ್ನನಾಗಬೇಕು ಮತ್ತು ಇದರ ಪರಿಣಾಮವಾಗಿ, ಮೌಲ್ಯವ್ಯವಸ್ಥೆಯನ್ನು ಮೈಗೂಡಿಸಿಕೊಂಡ ಒಳ್ಳೆಯ ಯುವಜನರು ಮೂಡಿಬರುತ್ತಾರೆ.

ಈ ವಿಧಾನದಿಂದ, ಒಬ್ಬ ವ್ಯಕ್ತಿ ಅಥವಾ ತಂಡವು ತಾಂತ್ರಿಕತೆ ಮತ್ತು ಅದರ ಅಳವಡಿಕೆಗಳಿಂದ ಸಂಪನ್ನವಾದರೆ, ಸಾಧನೆಯ ಉನ್ನತ ಸಾಮರ್ಥ್ಯ ಖಂಡಿತ ಉಂಟಾಗುವುದು.

ಈ ವಿಧಾನದಿಂದ, ಯಾವುದೇ ಸಂಸ್ಥೆಯ ನಾಯಕನೊಬ್ಬ ತನ್ನ ಜನರನ್ನು ಶಕ್ತಿಸಂಪನ್ನರನ್ನಾಗಿ ಮಾಡಿದಾಗ, ಹಲವಾರು ಕ್ಷೇತ್ರಗಳಲ್ಲಿ ಇಡೀ ದೇಶದ ಪರಿಸ್ಥಿತಿಯನ್ನೇ ಬದಲಾಯಿಸಬಲ್ಲ ನಾಯಕರುಗಳು ಹುಟ್ಟಿಕೊಳ್ಳುತ್ತಾರೆ.

ಈ ವಿಧಾನದಿಂದ ಮಹಿಳೆಯು ಶಕ್ತಿಸಂಪನ್ನಳಾದರೆ, ಸಮಾಜಕ್ಕೆ ಸುಸ್ಥಿರತೆ ಒದಗುವುದು ಖಂಡಿತ.

ಈ ವಿಧಾನದಿಂದ ರಾಜಕೀಯ ನಾಯಕರು ಉನ್ನತ ದೃಷ್ಟಿಯುಳ್ಳ ಕಾರ್ಯನೀತಿಗಳನ್ನು ಜಾರಿಗೆ ತಂದು ಜನರನ್ನು ಶಕ್ತಿಸಂಪನ್ನರನ್ನಾಗಿ ಮಾಡಿದರೆ, ದೇಶವು ಖಂಡಿತವಾಗಿಯೂ ಸಂಪದ್ಭರಿತವಾಗುತ್ತದೆ.

ಈ ವಿಧಾನದಿಂದ, ಧರ್ಮವು ಸಶಕ್ತವಾಗಿ, ಆಧ್ಯಾತ್ಮಿಕತೆಯಾಗಿ ಪರಿವರ್ತನೆ ಹೊಂದಿದಾಗ, ಜನಗಳ ಹೃದಯದಲ್ಲಿ ಶಾಂತಿ ಮತ್ತು ಸಂತೋಷಗಳು ಹೂವಿನಂತೆ ಅರಳುತ್ತವೆ.

ಈ ಸಶಕ್ತ ಹಂತವು ಮೌಲ್ಯ ವ್ಯವಸ್ಥೆಯಿಂದ ಕೂಡಿದ ಪ್ರಬುದ್ಧ ಪ್ರಜೆಗಳನ್ನು ಸೃಷ್ಟಿಸುತ್ತದೆ. *